ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 05-03-2004

# *ಬಲಹೀನ ಸಂಸ್ಕಾರಗಳನ್ನು ಸಂಸ್ಕಾರ ಮಾಡಿ ಸತ್ಯವಾದ ಹೋಲಿಯನ್ನು ಆಚರಿಸಿ ಆಗ ಸಂಸಾರ (ಪ್ರಪಂಚ) ಪರಿವರ್ತನೆಯಾಗುತ್ತದೆ.*

(कमज़ोर संस्कारों का संस्कार कर सच्ची होली मनाओ तब संसार परिवर्तन होगा)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಬಾಪ್‌ದಾದಾರವರು ತಮ್ಮ ನಾಲ್ಕೂ ಕಡೆಯ ರಾಜಪಾಲನೆಯನ್ನು ಪಡೆಯುತ್ತಿರುವಂತಹ ಮಕ್ಕಳನ್ನು ನೋಡುತ್ತಿದ್ದಾರೆ. ಈ ಪರಮಾತ್ಮನ ಪ್ರೀತಿ ತಾವು ಕೋಟಿಯಲ್ಲಿ ಕೆಲವರಾದ ಶ್ರೇಷ್ಠ ಆತ್ಮರಿಗೆ ಮಾತ್ರ ಪ್ರಾಪ್ತಿ ಆಗುತ್ತಿದೆ. ಬಾಪ್‌ದಾದಾ ಪ್ರತಿಯೊಂದು ಮಗುವಿನ 3 ರಾಜ್ಯ ಸಿಂಹಾಸನಗಳನ್ನು ನೋಡುತಿದ್ದಾರೆ. ಈ ಮೂರು ಸಿಂಹಾಸನಗಳು ಇಡೀ ಕಲ್ಪದಲ್ಲಿ ಈ ಸಂಗಮದಲ್ಲಿಯೇ ಮಕ್ಕಳಾದ ತಮಗೆ ಪ್ರಾಪ್ತಿಯಾಗುತ್ತವೆ. ಮೂರು ಸಿಂಹಾಸನಗಳು ಕಾಣಿಸುತ್ತಿವೆಯೇ? ಒಂದು ಈ ಭೃಕುಟಿ ಎಂಬ ಸಿಂಹಾಸನ, ಇದರಮೇಲೆ ಆತ್ಮ ಹೊಳೆಯುತ್ತಿದೆ. ಎರಡನೇ ಸಿಂಹಾಸನ ಪರಮಾತ್ಮನ ಹೃದಯಸಿಂಹಾಸನ. ಹೃದಯಸಿಂಹಾಸನಾಧಿಕಾರಿಗಳು ಆಗಿದ್ದೀರಲ್ಲವೇ! ಹಾಗೂ ಮೂರನೆಯದು ಭವಿಷ್ಯದ ವಿಶ್ವ ಸಿಂಹಾಸನ. ಹೃದಯಸಿಂಹಾಸನಾಧಿಕಾರಿಗಳು ಆಗಿರುವ ಕಾರಣ ಎಲ್ಲರಿಗಿಂತ ಭಾಗ್ಯವಂತರಾಗಿದ್ದೀರಿ. ಈ ಪರಮಾತ್ಮನ ಹೃದಯಸಿಂಹಾಸನವು ತಾವು ಅದೃಷ್ಟಶಾಲಿ ಮಕ್ಕಳಿಗೆ ಮಾತ್ರ

ಪ್ರಾಪ್ತಿಯಾಗುತ್ತದೆ. **ಭವಿಷ್ಯ ವಿಶ್ವದ ರಾಜ್ಯಸಿಂಹಾಸನವಂತೂ ಪ್ರಾಪ್ತಿ ಆಗಲೇಬೇಕು. ಆದರೆ ಯಾರು ಅಧಿಕಾರಿಗಳಾಗುತ್ತಾರೆ? ಯಾರು ಈ ಸಮಯದಲ್ಲಿ ಸ್ವರಾಜ್ಯಾಧಿಕಾರಿಗಳಾಗುತ್ತಾರೆಯೋ ಅವರು ಅಧಿಕಾರಿಗಳಾಗುತ್ತಾರೆ. ಸ್ವರಾಜ್ಯವಿಲ್ಲವೆಂದರೆ ವಿಶ್ವದ ರಾಜ್ಯವೂ ಸಹ ಇಲ್ಲ ಏಕೆಂದರೆ ಈ ಸಮಯದ ಸ್ವರಾಜ್ಯದ ಅಧಿಕಾರದ ಮೂಲಕವೇ ವಿಶ್ವರಾಜ್ಯವು ಪ್ರಾಪ್ತಿಯಾಗುತ್ತದೆ. ವಿಶ್ವದ ರಾಜ್ಯದ ಸರ್ವ ಸಂಸ್ಕಾರವು ಈ ಸಮಯದಲ್ಲಿಯೇ ತಯಾರಾಗುತ್ತದೆ.** ಅಂದಮೇಲೆ ಪ್ರತಿಯೊಬ್ಬರೂ ತಮ್ಮನ್ನು ಸದಾ ಸ್ವರಾಜ್ಯಾಧಿಕಾರಿ ಎಂಬ ಅನುಭವ ಮಾಡುತ್ತಿದ್ದೀರಾ? ಭವಿಷ್ಯದ ರಾಜ್ಯದ ಗಾಯನವು ಏನಿದೆ ಎಂಬುದನ್ನು ತಿಳಿದುಕೊಂಡಿದ್ದೀರಲ್ಲವೇ! ಒಂದೇ ಧರ್ಮ, ಒಂದೇ ರಾಜ್ಯ, ಒಂದೇ ಕಾನೂನು (ಲಾ .ಅಂಡ್ ಆರ್ಡರ್), ಸುಖ-ಶಾಂತಿ, ಸಂಪತ್ತಿನಿಂದ ತುಂಬಿದ ರಾಜ್ಯ, ನೆನಪು ಬರುತ್ತದೆಯೇ-ಎಷ್ಟು ಬಾರಿ ಈ ಸ್ವರಾಜ್ಯ ಹಾಗೂ ವಿಶ್ವರಾಜ್ಯವನ್ನು ಮಾಡಿದ್ದೀರಿ? ನೆನಪಿದೆಯೇ ಎಷ್ಟು ಬಾರಿ ಮಾಡಿದ್ದೀರಿ? ಸ್ಪಷ್ಟವಾಗಿ ನೆನಪು ಬರುತ್ತದೆಯೇ? ಅಥವಾ ನೆನಪು ಮಾಡಿಕೊಳ್ಳುವುದರಿಂದ ನೆನಪು ಬರುತ್ತಿದೆಯೇ? ನೆನ್ನೆ ರಾಜ್ಯ ಮಾಡಿದ್ದೀರಿ ಹಾಗೂ ನಾಳೆ ರಾಜ್ಯ ಮಾಡಬೇಕು. ಆ ರೀತಿ ಸ್ಪಷ್ಟ ಸ್ಮೃತಿ ಇದೆಯೇ? ಈ ಸ್ಪಷ್ಟ ಸ್ಮೃತಿಯು ಯಾರು ಈಗ ಸದಾ ಸ್ವರಾಜ್ಯಾಧಿಕಾರಿಗಳಾಗಿರುತ್ತಾರೆಯೋ ಆ ಆತ್ಮರಿಗೆ ಮಾತ್ರ ಇರುತ್ತದೆ. ಅಂದಮೇಲೆ ಸ್ವರಾಜ್ಯಾಧಿಕಾರಿಗಳು ಆಗಿದ್ದೀರಾ? ಸದಾ ಆಗಿದ್ದೀರಾ ಅಥವಾ ಕೆಲವೊಮ್ಮೆಯೋ? ಏನು ಹೇಳುತ್ತೀರಿ? ಸದಾ ಸ್ವರಾಜ್ಯಾಧಿಕಾರಿಗಳಾಗಿದ್ದೀರಾ? ಡಬಲ್ ವಿದೇಶಿಗಳ ಸರದಿ ಅಲ್ಲವೇ. ಅಂದ ಮೇಲೆ ಸ್ವರಾಜ್ಯಾಧಿಕಾರಿಗಳು ಸದಾ ಆಗಿದ್ದೀರಾ? ಪಾಂಡವರು ಸದಾ ಆಗಿದ್ದೀರಾ? ಸದಾ ಎಂಬ ಶಬ್ಧವನ್ನು ಕೇಳುತ್ತಿದ್ದೇವೆ ಏಕೆ? ಯಾವಾಗ ಈ ಒಂದು ಜನ್ಮದಲ್ಲಿ, ಚಿಕ್ಕದಾದ ಜನ್ಮವಾಗಿದೆ, ಈ ಚಿಕ್ಕ ಜನ್ಮದಲ್ಲಿ ಒಂದುವೇಳೆ ಸದಾ ಸ್ವರಾಜ್ಯಾಧಿಕಾರಿಗಳು ಆಗಲಿಲ್ಲವೆಂದರೆ 21 ಜನ್ಮದ ಸ್ವರಾಜ್ಯವು ಹೇಗೆ ಪ್ರಾಪ್ತಿಯಾಗುತ್ತದೆ? 21 ಜನ್ಮಗಳ ರಾಜ್ಯಾಧಿಕಾರಿಗಳು ಆಗಬೇಕೋ ಅಥವಾ ಸ್ವಲ್ಪ ಸಮಯಕ್ಕೆ ಆಗಬೇಕೇ? ಯಾವುದರ ಒಪ್ಪಿಗೆ ಇದೆ? ಸದಾ ಆಗಬೇಕೇ? ಸದಾ? ತಲೆಯಾದರೂ ಅಲ್ಲಾಡಿಸಿ. ಒಳ್ಳೆಯದು. 21 ಜನ್ಮಗಳೇ ರಾಜ್ಯಾಧಿಕಾರಿಗಳಾಗಬೇಕು. ರಾಜ್ಯಾಧಿಕಾರಿ ಅರ್ಥಾತ್ ರಾಯಲ್ ಪರಿವಾರದಲ್ಲಿಯೂ ಸಹ ರಾಜ್ಯಾಧಿಕಾರಿಗಳು. ಸಿಂಹಾಸನದ ಮೇಲೆ ಕೆಲವರು ಕುಳಿತುಕೊಳ್ಳುತ್ತಾರೆ ಆದರೆ ಅಲ್ಲಿ ಸಿಂಹಾಸನಾಧಿಕಾರಿಗಳಿಗೆ ಎಷ್ಟು ಸ್ವಮಾನವಿದೆಯೋ ಅಷ್ಟೇ ರಾಯಲ್ ಪರಿವಾರದವರಿಗೂ ಇರುತ್ತದೆ. ಅವರಿಗೂ ಸಹ ರಾಜ್ಯಾಧಿಕಾರಿ ಎಂದೇ ಹೇಳಲಾಗುತ್ತದೆ. ಆದರೆ ಲೆಕ್ಕವೂ ಈ ಸಮಯಕ್ಕೆ ಸಂಬಂಧಪಟ್ಟಿದೆ. ಈಗ ಕೆಲವೊಮ್ಮೆ ಆದರೆ ಅಲ್ಲಿಯೂ ಸಹ ಕೆಲವೊಮ್ಮೆ ಆಗಿಬಿಡುತ್ತದೆ. ಈಗ ಸದಾ ಆದರೆ ಅಲ್ಲಿಯೂ ಸಹ ಸದಾ ಅಂದಮೇಲೆ ಬಾಪ್‌ದಾದಾರವರಿಂದ ಸಂಪೂರ್ಣ ಅಧಿಕಾರವನ್ನು ಪಡೆಯಬೇಕು ಅರ್ಥಾತ್ ವರ್ತಮಾನ ಹಾಗೂ ಭವಿಷ್ಯದ ಸಂಪೂರ್ಣ 21 ಜನ್ಮಗಳ ರಾಜ್ಯಾಧಿಕಾರಿ ಆಗಬೇಕು. ಡಬಲ್ ವಿದೇಶಿಗಳು ಪೂರ್ಣ ಅಧಿಕಾರವನ್ನು ಪಡೆಯುವಂತಹವರೋ ಅಥವಾ ಅರ್ಧ ಅಥವಾ ಸ್ವಲ್ಪವೋ? ಏನು? ಪೂರ್ಣ ಅಧಿಕಾರವನ್ನು ಪಡೆಯಬೇಕೇ? ಸಂಪೂರ್ಣ. ಒಂದು ಜನ್ಮವೂ ಸಹ ಕಡಿಮೆಯಾಗಬಾರದು. ಅಂದಮೇಲೆ ಏನು ಮಾಡಬೇಕಾಗುತ್ತದೆ? ಏನು ಮಾಡಬೇಕಾಗುತ್ತದೆ?

ಬಾಪ್‌ದಾದಾ ಪ್ರತಿಯೊಂದು ಮಗುವನ್ನು ಸಂಪೂರ್ಣ ಅಧಿಕಾರಿಯನ್ನಾಗಿ ಮಾಡುತ್ತಿದ್ದಾರೆ. ಆಗಿದ್ದೀರಲ್ಲವೇ? ಪಕ್ಕಾ? ಆಗುತ್ತೇವೆಯೋ ಅಥವಾ ಇಲ್ಲವೋ ಎಂಬ ಪ್ರಶ್ನೆ ಇದೆಯೇ? ಇದೆಯೇ? ಆಗುತ್ತೇನೆಯೋ ಇಲ್ಲವೋ ಎಂಬ ಪ್ರಶ್ನೆಯೂ ಕೆಲವೊಮ್ಮೆ ಬರುತ್ತದೆಯೇ? ಆಗಲೇಬೇಕು. ಪಕ್ಕಾ? ಆಗಲೇಬೇಕು ಎನ್ನುವವರು ಕೈಯನ್ನು ಎತ್ತಿರಿ.

ಆಗಲೇಬೇಕೇ? ಒಳ್ಳೆಯದು, ಇವರೆಲ್ಲರೂ ಯಾವ ಮಾಲೆಯ ಮಣಿಗಳು ಆಗುತ್ತಾರೆ? 108ರ ಮಾಲೆಯೇ? ಇಲ್ಲಿ ಎಷ್ಟು ಆತ್ಮರು ಬಂದಿದ್ದಾರೆ? ಎಲ್ಲರೂ 108ರಲ್ಲಿ ಬರಬೇಕೇ? ಅಂದಮೇಲೆ ಇಲ್ಲಿ 1800 ಇದ್ದಾರೆ ಹಾಗಾದರೆ 108ರ ಮಾಲೆಯನ್ನು ಹೆಚ್ಚಿಸೋಣವೇ? ಒಳ್ಳೆಯದು. 16000ದ ಮಾಲೆಯಂತೂ ಇಷ್ಟವಾಗುವುದಿಲ್ಲ. 16000ದ ಮಾಲೆಯಲ್ಲಿ ಹೋಗುತ್ತೀರಾ? ಹೋಗುವುದಿಲ್ಲ ತಾನೇ? ಇದು ನಿಶ್ಚಯ ಹಾಗೂ ನಿಶ್ಚಿತವಾಗಿದೆ, ಆ ರೀತಿಯ ಅನುಭವವಿರಬೇಕು. ನಾವು ಆಗದಿದ್ದರೆ ಇನ್ನಾರು ಆಗುತ್ತಾರೆ! ನಶೆಯಿದೆಯೇ? ತಾವಾಗದಿದ್ದರೆ ಬೇರೆ ಯಾರೂ ಆಗುವುದಿಲ್ಲ ತಾನೇ? ತಾವೇ ಆಗುವಂತಹವರಲ್ಲವೇನು! ಹೇಳಿ, ತಾವೇ ಅಲ್ಲವೇ! ಪಾಂಡವರು ತಾವೇ ತಯಾರಾಗುವವರಲ್ಲವೇ? ಒಳ್ಳೆಯದು. ಹಿಂದೆ ಕುಳಿತಿರುವವರು, ತಾವು ತಯಾರಾಗುವವರು. ತಮ್ಮ ದರ್ಪಣದಲ್ಲಿ ಸಾಕ್ಷಾತ್ಕಾರ ಮಾಡಿಕೊಂಡಿದ್ದೀರಾ? ಬಾಪ್‌ದಾದಾರವರು ಪ್ರತಿಯೊಂದು ಮಗುವಿನ ನಿಶ್ಚಯವನ್ನು ನೋಡಿ ಬಲಿಹಾರಿಯಾಗುತ್ತಾರೆ. ವಾಹ್! ವಾಹ್! ಪ್ರತಿಯೊಂದು ಮಗು ವಾಹ್! ವಾಹ್! ವಾಹ್! ಎನ್ನುವವರು ತಾನೇ. ವಾಹ್! ವಾಹ್! ಎನ್ನುತ್ತಿದ್ದೀರಾ ಅಥವಾ ವೈ (ಏಕೆ). ವೈ ಎನ್ನುತ್ತಿದ್ದೀರಾ? ಕೆಲವೊಮ್ಮೆ ವೈ ಆಗಿಬಿಡುತ್ತದೆಯೇ? ಇಲ್ಲವೇ? ಅಥವಾ ವೈ ಹಾಗೂ ಹಾಯ್ (ಅಯ್ಯೋ) ಮತ್ತೆ ಮೂರನೆಯದು ಕ್ರೈ (ಅಳುವುದು), ತಾವಂತೂ ವಾಹ್! ವಾಹ್! ಎನ್ನುವವರಲ್ಲವೇ!

ಬಾಪ್‌ದಾದಾರವರಿಗೆ ಡಬಲ್ ವಿದೇಶಿಯರ ಮೇಲೆ ವಿಶೇಷ ನಶೆಯಿದೆ. ಏಕೆ? ಭಾರತವಾಸಿಯರು ತಂದೆಯನ್ನು ಭಾರತದಲ್ಲಿ ಕರೆದರು. ಆದರೆ ಡಬಲ್ ವಿದೇಶಿಯರ ಮೇಲೆ ನಶೆಯು ಯಾವ ಕಾರಣದಿಂದ ಇದೆ ಎಂದರೆ ಡಬಲ್ ವಿದೇಶಿಯರು ಬಾಪ್‌ದಾದಾರವರನ್ನು ತಮ್ಮ ಸತ್ಯತೆಯ ಪ್ರೀತಿಯ ಬಂಧನದಲ್ಲಿ ಬಂಧಿಸಿದ್ದಾರೆ. ಮೆಜಾರಿಟಿ ಸತ್ಯತೆಯುಳ್ಳವರು ಆಗಿದ್ದಾರೆ. ಕೆಲವರು ಮುಚ್ಚಿಡುತ್ತಾರೆ ಆದರೆ ಮೆಜಾರಿಟಿ ತಮ್ಮ ಬಲಹೀನತೆಯನ್ನು ಸತ್ಯತೆಯಿಂದ ತಂದೆಯ ಮುಂದಿಡುತ್ತಾರೆ ಅಂದಮೇಲೆ ತಂದೆಗೆ ಎಲ್ಲದಕ್ಕಿಂತ ಸತ್ಯತೆಯೇ ಇಷ್ಟವಾಗುತ್ತದೆ. ಆದ್ದರಿಂದ ಭಕ್ತಿಯಲ್ಲಿಯೂ ಸಹ ಪರಮಾತ್ಮ ಸತ್ಯ ಎಂದು ಹೇಳುತ್ತಾರೆ. ಎಲ್ಲದಕ್ಕಿಂತ ಪ್ರಿಯವಾದ ವಸ್ತು ಸತ್ಯತೆಯಾಗಿದೆ ಏಕೆಂದರೆ ಯಾರಲ್ಲಿ ಸತ್ಯತೆ ಇರುತ್ತದೆಯೋ ಅವರಲ್ಲಿ ಸ್ವಚ್ಛತೆಯಿರುತ್ತದೆ. ಸ್ವಚ್ಛ ಹಾಗೂ ಸ್ಪಷ್ಟವಾಗಿರುತ್ತಾರೆ ಆದ್ದರಿಂದ ಬಾಪ್‌ದಾದಾರವರನ್ನು ಡಬಲ್ ವಿದೇಶಿಯರ ಸತ್ಯತೆಯ ಪ್ರೀತಿಯ ಹಗ್ಗವು ಸೆಳೆಯುತ್ತದೆ. ಸ್ವಲ್ಪ ಮಿಶ್ರಣವಾಗುತ್ತದೆ, ಕೆಲವು. ಆದರೆ ಡಬಲ್ ವಿದೇಶಿಯರು ಈ ಸತ್ಯತೆಯ ವಿಶೇಷತೆಯನ್ನು ಎಂದೂ ಸಹ ಬಿಡುವುದಿಲ್ಲ. ಸತ್ಯತೆಯ ಶಕ್ತಿ ಒಂದು ಲಿಫ್ಟ್ ನ ಕೆಲಸವನ್ನು ಮಾಡುತ್ತದೆ. ಎಲ್ಲರಿಗೂ ಸತ್ಯತೆಯು ಇಷ್ಟವಾಗುತ್ತದೆಯಲ್ಲವೇ! ಪಾಂಡವರಿಗೆ ಇಷ್ಟವಾಗುತ್ತದೆಯೇ? ಆ ರೀತಿ ನೋಡಿದರೆ ಮಧುಬನದವರಿಗೂ ಸಹ ಇಷ್ಟವಾಗುತ್ತದೆ. ಮಧುಬನದ ಎಲ್ಲಾ ಕಡೆಯವರೂ ಸಹ ಕೈಯನ್ನು ಎತ್ತಿರಿ. ದಾದಿಯರನ್ನು ಭುಜಗಳು ಎಂದು ಹೇಳುತ್ತಾರಲ್ಲವೇ, ಅಂದಮೇಲೆ ಮಧುಬನ, ಶಾಂತಿವನದವರೆಲ್ಲರೂ ಕೈಯನ್ನು ಎತ್ತಿರಿ. ದೊಡ್ಡದಾಗಿ ಎತ್ತಿರಿ. ಮಧುಬನದವರಿಗೆ ಸತ್ಯತೆ ಇಷ್ಟವಾಗುತ್ತದೆಯಲ್ಲವೇ? ಯಾರಲ್ಲಿ ಸತ್ಯತೆ ಇರುತ್ತದೆಯೋ ಅವರಿಗೆ ತಂದೆಯನ್ನು ನೆನಪು ಮಾಡುವುದು ಬಹಳ ಸಹಜವಾಗುತ್ತದೆ. ಏಕೆ? ತಂದೆಯೂ ಸಹ ಸತ್ಯವಲ್ಲವೇ! ಅಂದಮೇಲೆ ಸತ್ಯತಂದೆಯ ನೆನಪು ಯಾರು ಸತ್ಯವಾಗಿರುತ್ತಾರೆಯೋ ಅವರಿಗೇ ಬೇಗ ಬರುತ್ತದೆ. ಶ್ರಮ ಪಡಬೇಕಾಗಿಲ್ಲ. ಒಂದುವೇಳೆ ಈಗಲೂ ಸಹ ನೆನಪಿನಲ್ಲಿ ಶ್ರಮವಾಗುತ್ತದೆ ಎಂದರೆ ಯಾವುದಾದರೂ ಒಂದು ಸೂಕ್ಷ್ಮ ಸಂಕಲ್ಪದಲ್ಲಿ, ಸ್ವಪ್ನದಲ್ಲಿ ಯಾವುದೋ ಸತ್ಯತೆಯ ಕೊರತೆ ಇದೆ ಎಂದು ತಿಳಿಯಿರಿ. ಎಲ್ಲಿ ಸತ್ಯತೆ ಇದೆಯೋ ಅಲ್ಲಿ ಬಾಬಾ ಎಂದು ಸಂಕಲ್ಪ ಮಾಡಿದಿರಿ, ಪ್ರಭು ಹಾಜರಾಗುತ್ತಾರೆ. ಆದ್ದರಿಂದ ಬಾಪ್‌ದಾದಾರವರಿಗೆ ಸತ್ಯತೆಯು ಬಹಳ ಪ್ರಿಯವಾಗಿದೆ.

ಬಾಪ್‌ದಾದಾರವರು ಎಲ್ಲಾ ಮಕ್ಕಳಿಗೂ ಇದೇ ಎಚ್ಚರಿಕೆಯನ್ನು ಕೊಡುತ್ತಾರೆ - 21 ಜನ್ಮಗಳ ಪೂರ್ಣ ಆಸ್ತಿಯನ್ನು ಪಡೆಯಬೇಕೆಂದರೆ ಈಗ ಸ್ವರಾಜ್ಯವನ್ನು ಪರಿಶೀಲನೆ ಮಾಡಿಕೊಳ್ಳಿರಿ. ಈಗಿನ ಸ್ವರಾಜ್ಯಾಧಿಕಾರಿಗಳಾಗಬೇಕು, ಎಷ್ಟು ಸ್ವರಾಜ್ಯಾಧಿಕಾರಿ ಆಗುತ್ತಾರೆಯೋ ಅಷ್ಟೇ ಅಧಿಕಾರವು ಪ್ರಾಪ್ತಿಯಾಗುತ್ತದೆ ಅಂದಮೇಲೆ ಪರಿಶೀಲನೆ ಮಾಡಿಕೊಳ್ಳಿರಿ - ಹೇಗೆ ಗಾಯನವಿದೆ ಒಂದೇ ರಾಜ್ಯ, ಒಂದೇ ರಾಜ್ಯವಿರುತ್ತದೆ, ಎರಡಲ್ಲ. ಅಂದಮೇಲೆ ವರ್ತಮಾನದ ಸ್ವರಾಜ್ಯದ ಸ್ಥಿತಿಯಲ್ಲಿ ಸದಾ ಒಂದೇ ರಾಜ್ಯವಿದೆಯೇ? ಸ್ವರಾಜ್ಯವಿದೆಯೇ ಅಥವಾ ಕೆಲವೊಮ್ಮೆ ಪರರಾಜ್ಯವೂ ಸಹ ನಡೆಯುತ್ತದೆಯೇ? ಒಂದುವೇಳೆ ಮಾಯಾರಾಜ್ಯವಿದ್ದರೆ ಪರರಾಜ್ಯ ಎನ್ನಬಹುದೇ ಅಥವಾ ಸ್ವರಾಜ್ಯವೇ? ಸದಾ ಒಂದು ರಾಜ್ಯವಿರುತ್ತದೆಯೋ, ಪರಾಧೀನರು ಆಗುವುದಿಲ್ಲವೇ? ಕೆಲವೊಮ್ಮೆ ಮಾಯೆಯ, ಕೆಲವೊಮ್ಮೆ ಸ್ವಯಂನ ರಾಜ್ಯವಿದ್ದರೆ ತಿಳಿದುಕೊಳ್ಳಿ - ಸಂಪೂರ್ಣ ಆಸ್ತಿ ಈಗ ಪ್ರಾಪ್ತಿಯಾಗುತ್ತಿದೆ, ಆಗಿಲ್ಲ, ಆಗುತ್ತಿದೆ. ಪರಿಶೀಲನೆ ಮಾಡಿಕೊಳ್ಳಿರಿ ಸದಾ ಒಂದುರಾಜ್ಯವಿದೆಯೇ? ಒಂದು ಧರ್ಮ - ಧರ್ಮ ಅರ್ಥಾತ್ ಧಾರಣೆ. ವಿಶೇಷ ಧಾರಣೆ ಯಾವುದು? ಪವಿತ್ರತೆಯದ್ದು. ಅಂದಮೇಲೆ ಒಂದು ಧರ್ಮ ಅರ್ಥಾತ್ ಸಂಕಲ್ಪ, ಸ್ವಪ್ನದಲ್ಲಿಯೂ ಸಹ ಪವಿತ್ರತೆಯಿದೆಯೇ? ಸಂಕಲ್ಪದಲ್ಲಿಯೂ, ಸ್ವಪ್ನದಲ್ಲಿಯೂ ಒಂದುವೇಳೆ ಅಪವಿತ್ರತೆಯ ನೆರಳು ಇದ್ದರೆ ಏನೆಂದು ಹೇಳಬಹುದು? ಒಂದು ಧರ್ಮವಿದ್ದಂತೆಯೇ? ಪವಿತ್ರತೆ ಸಂಪೂರ್ಣವಾಗಿದೆಯೇ? ಪರಿಶೀಲನೆ ಮಾಡಿಕೊಳ್ಳಿರಿ, ಏಕೆಂದರೆ ಸಮಯವು ತೀವ್ರವಾಗಿ ಹೋಗುತ್ತಿದೆ. ಸಮಯ ತೀವ್ರವಾಗಿ ಹೋಗುತ್ತಿದೆ ಮತ್ತು ಸ್ವಯಂ ಒಂದುವೇಳೆ ನಿಧಾನವಾಗಿದ್ದರೆ ಆಗ ಸಮಯಕ್ಕೆ ಗುರಿ ತಲುಪಲು ಸಾಧ್ಯವಾಗುವುದಿಲ್ಲ ತಾನೇ! ಆದ್ದರಿಂದ ಪದೇ- ಪದೇ ಪರಿಶೀಲನೆ ಮಾಡಿಕೊಳ್ಳಿರಿ. ಒಂದುರಾಜ್ಯವಿದೆಯೇ? ಒಂದುಧರ್ಮವಿದೆಯೇ? ಲಾ ಅಂಡ್ ಆರ್ಡರ್(ಕಾನೂನು) ಇದೆಯೇ? ಮಾಯೆ ತನ್ನ ಆದೇಶವನ್ನು ನಡೆಸುತ್ತದೆಯೇ? ಪರಮಾತ್ಮನ ಮಕ್ಕಳು ಎಂದರೆ ಶ್ರೀಮತದ ಲಾ ಅಂಡ್ ಆರ್ಡರ್‌ನಂತೆ ನಡೆಯುವವರು ಮಾಯೆ ಹೇಳಿದಂತೆ ಅಲ್ಲ. ಭವಿಷ್ಯದ ಎಲ್ಲಾ ಸಂಸ್ಕಾರವು ಈಗಲೇ ಕಾಣಿಸಲಿ ಏಕೆಂದರೆ ಸಂಸ್ಕಾರವನ್ನು ಈಗಲೇ ತುಂಬಿಕೊಳ್ಳಬೇಕು. ಅಲ್ಲಿ ತುಂಬಿಕೊಳ್ಳುವುದಲ್ಲ, ಇಲ್ಲಿಯೇ ತುಂಬಿಕೊಳ್ಳಬೇಕು. ಸುಖವಿದೆಯೇ? ಶಾಂತಿ ಇದೆಯೇ? ಸಂಪತ್ತಿವಂತರಾಗಿದ್ದೀರಾ? ಸುಖವು ಈಗ ಸಾಧನಗಳ ಆಧಾರದ ಮೇಲೆ ಇಲ್ಲ ತಾನೇ? ಅತೀಂದ್ರಿಯ ಸುಖವಿದೆಯೇ? ಸಾಧನಗಳು ಇಂದ್ರಿಯಗಳ ಆಧಾರವಾಗಿದೆ. ಅತೀಂದ್ರಿಯ ಸುಖವು ಸಾಧನಗಳ ಆಧಾರದ ಮೇಲೆ ಇಲ್ಲ. ಅಖಂಡ ಶಾಂತಿ ಇದೆಯೇ? ಖಂಡನೆ ಆಗುವುದಿಲ್ಲ ತಾನೇ? ಏಕೆಂದರೆ ಸತ್ಯಯುಗದ ರಾಜ್ಯದ ಮಹಿಮೆ ಏನು? ಅಖಂಡ ಶಾಂತಿ, ಸ್ಥಿರವಾದ ಶಾಂತಿ. ಸಂಪನ್ನತೆ ಇದೆಯೇ? ಸಂಪತ್ತಿನಿಂದ ಏನಾಗುತ್ತದೆ? ಸಂಪನ್ನತೆ ಆಗುತ್ತದೆ. ಸರ್ವ ಸಂಪತ್ತು ಇದೆಯೇ? ಗುಣ, ಶಕ್ತಿಗಳು, ಜ್ಞಾನ ಈ ಸಂಪತ್ತು ಇದೆಯೇ? ಅದರ ಲಕ್ಷಣವು ಏನಾಗಿರುತ್ತದೆ? ಒಂದುವೇಳೆ ನಾನು ಸಂಪತ್ತಿನಲ್ಲಿ ಸಂಪನ್ನನಾಗಿದ್ದೇನೆ ಎಂಬುದರ ಲಕ್ಷಣವೇನು? ಸಂತುಷ್ಟತೆ. ಸರ್ವಪ್ರಾಪ್ತಿಗಳ ಆಧಾರ ಸಂತುಷ್ಟತೆ, ಅಸಂತುಷ್ಟತೆಯು ಅಪ್ರಾಪ್ತಿಯ ಸಾಧನವಾಗಿದೆ ಅಂದಮೇಲೆ ಪರಿಶೀಲನೆ ಮಾಡಿಕೊಳ್ಳಿ - ಒಂದು ವಿಶೇಷತೆಯೂ ಸಹ ಕಡಿಮೆ ಆಗಬಾರದು. ಇಷ್ಟು ಪರಿಶೀಲನೆ ಮಾಡಿಕೊಳ್ಳುತ್ತೀರಾ? ಮಾಡಿಕೊಳ್ಳುತ್ತೀರಾ? ಪೂರ್ಣ ಜಗತ್ತನ್ನು ಈಗಿನ ತಮ್ಮ ಸಂಸ್ಕಾರದ ಮೂಲಕವೇ ಮಾಡುತ್ತೀರಿ. ಈಗಿನ ಸಂಸ್ಕಾರವೇ ಭವಿಷ್ಯದ ಸಂಸಾರ (ಜಗತ್ತು) ವಾಗುತ್ತದೆ. ಅಂದಮೇಲೆ ತಾವೆಲ್ಲರೂ ಏನು ಹೇಳುತ್ತೀರಿ? ತಾವು ಯಾರಾಗಿದ್ದೀರಿ? ವಿಶ್ವಪರಿವರ್ತಕರಲ್ಲವೇ! ಹೌದಾ? ವಿಶ್ವಪರಿವರ್ತಕರೇ? ಅಂದಾಗ ವಿಶ್ವಪರಿವರ್ತಕರು ಮೊದಲು ಸ್ವ- ಪರಿವರ್ತಕರಾಗಿದ್ದೀರಾ? ಈ ಎಲ್ಲಾ ಸಂಸ್ಕಾರಗಳನ್ನು ತಮ್ಮಲ್ಲಿ ಚೆಕ್

ಮಾಡಿಕೊಳ್ಳಿ. ಇದರಿಂದ ಅರ್ಥವಾಗುತ್ತದೆ - ನಾನು 108ರ ಮಾಲೆಯಲ್ಲಿ ಇದ್ದೇನೆಯೇ ಅಥವಾ ಹಿಂದೆ-ಮುಂದೆ ಇದ್ದೇನೆಯೇ? ಈ ಪರಿಶೀಲನೆ ಒಂದು ದರ್ಪಣವಾಗಿದೆ, ಈ ದರ್ಪಣದಲ್ಲಿ ತಮ್ಮ ವರ್ತಮಾನ ಹಾಗೂ ಭವಿಷ್ಯವನ್ನು ನೋಡಿ. ನೋಡಿಕೊಳ್ಳಬಲ್ಲಿರಾ?

ಈಗ ಹೋಲಿ ಆಚರಿಸಲು ಬಂದಿದ್ದೀರಲ್ಲವೇ! ಹೋಲಿ ಆಚರಿಸಲು ಬಂದಿದ್ದೀರಿ ಒಳ್ಳೆಯದು. ಹೋಲಿಯ ಅರ್ಥವನ್ನು ವರ್ಣನೆ ಮಾಡಲಾಗಿದೆ ಯಲ್ಲವೇ! ಮಾಡಲಾಗಿದೆ ತಾನೇ? ಬಾಪ್‌ದಾದಾರವರು ಇಂದು ವಿಶೇಷವಾಗಿ ಡಬಲ್ ವಿದೇಶದವರಿಗೆ ಹೇಳುತ್ತಾರೆ, ಮಧುಬನದವರು ಜೊತೆಯಲ್ಲಿ ಇದ್ದಾರೆ. ಮಧುಬನದವರಿಗೂ ಸಹ ಜೊತೆಯಲ್ಲಿ ಹೇಳುತ್ತಿದ್ದಾರೆ. ಯಾರೆಲ್ಲಾ ಬಂದಿದ್ದೀರಿ, ಬಾಂಬೆಯಿಂದ ಬಂದಿರಬಹುದು, ದೆಹಲಿಯಿಂದ ಬಂದಿರಬಹುದು ಆದರೆ ಈ ಸಮಯದಲ್ಲಿ ಮಧುಬನ ನಿವಾಸಿಗಳು. ಡಬಲ್ ವಿದೇಶಿಗಳೂ ಸಹ ಈ ಸಮಯದಲ್ಲಿ ಎಲ್ಲಿಯವರಾಗಿದ್ದೀರಿ? ಮಧುಬನ ನಿವಾಸಿಗಳಲ್ಲವೇ! ಮಧುಬನ ನಿವಾಸಿಗಳಾಗುವುದು ಒಳ್ಳೆಯದಲ್ಲವೇ! ಎಲ್ಲಾ ಮಕ್ಕಳಿಗೂ ಇಲ್ಲಿ ಸಮ್ಮುಖದಲ್ಲಿ ಕುಳಿತಿರಲಿ, ತಮ್ಮ-ತಮ್ಮ ಸ್ಥಾನದಲ್ಲಿ ಕುಳಿತಿರಲಿ, ಬಾಪ್‌ದಾದಾ ಒಂದು ಪರಿವರ್ತನೆಯನ್ನು ಇಷ್ಟಪಡುತ್ತಾರೆ - ಒಂದುವೇಳೆ ಧೈರ್ಯವಿದ್ದರೆ, ಬಾಪ್‌ದಾದಾ ತಿಳಿಸುತ್ತಾರೆ ಧೈರ್ಯವಿದೆಯೇ? ಧೈರ್ಯವಿದೆಯೇ? ಧೈರ್ಯವಿದೆಯೇ? ಮಾಡಬೇಕಾಗುತ್ತದೆ. ಮಾಡಬೇಕಾಗುತ್ತದೆ, ಕೈ ಎತ್ತಿದಿರಿ ಆಗಿ ಹೋಯಿತು ಈ ರೀತಿ ಅಲ್ಲ. ಕೈ ಎತ್ತುವುದು ಬಹಳ ಒಳ್ಳೆಯದು ಆದರೆ ಮನಸ್ಸಿನ ಕೈಯನ್ನು ಎತ್ತಬೇಕು. ಇಂದು ಕೇವಲ ಈ ಕೈ ಎತ್ತಬೇಡಿ ಮನಸ್ಸಿನ ಕೈಯನ್ನು ಎತ್ತಬೇಕು.

ಡಬಲ್ ವಿದೇಶಿಗಳು ಸಮೀಪ ಕುಳಿತಿದ್ದೀರಲ್ಲವೇ, ಹತ್ತಿರದವರಿಗೆ ಮನಸ್ಸಿನ ಮಾತುಗಳನ್ನು ಹೇಳಲಾಗುತ್ತದೆ. ಮೆಜಾರಿಟಿ ನೋಡಲಾಗುತ್ತದೆ, ಎಲ್ಲರಿಗೂ ಬಾಪ್‌ದಾದಾರವರೊಂದಿಗೆ, ಸೇವೆಯೊಂದಿಗೆ ಬಹಳ ಪ್ರೀತಿಯಿದೆ. ತಂದೆಯ ಪ್ರೀತಿ ಇಲ್ಲದೇ ಇರುವುದಿಲ್ಲ, ಸೇವೆ ಇಲ್ಲದೆಯೂ ಇರಲು ಸಾಧ್ಯವಿಲ್ಲ. ಎಲ್ಲರ ಈ ಸರ್ಟಿಫಿಕೇಟ್ ಚೆನ್ನಾಗಿದೆ. ಬಾಪ್‌ದಾದಾ- ಎಲ್ಲಾ ಕಡೆ ನೋಡುತ್ತಿದ್ದಾರೆ ಆದರೆ..... ಆದರೆ ಬಂದುಬಿಟ್ಟಿತು. ಸಾಮಾನ್ಯವಾಗಿ ಹೆಚ್ಚಾಗಿ ಈ ಶಬ್ಧ ಬರುತ್ತದೆ. ಯಾವುದಾದರೂ ಒಂದು ಅಂತಹ ಸಂಸ್ಕಾರ ಹಳೆಯದು ಇಷ್ಟ ಇರುವುದಿಲ್ಲ ಆದರೂ ಆ ಹಳೆಯ ಸಂಸ್ಕಾರ ಇಲ್ಲಿಯತನಕವೂ ಆಕರ್ಷಣೆ ಮಾಡಿಬಿಡುತ್ತದೆ ಅಂದಮೇಲೆ ಹೋಲಿಯನ್ನು ಆಚರಿಸಲು ಬಂದಿದ್ದೀರಿ ಅಂದಾಗ ಹೋಲಿಯ ಅರ್ಥವಾಗಿದೆ - ಕಳೆದದ್ದು ಕಳೆದುಹೋಯಿತು. ಆಗಿಹೋಯಿತು. ಯಾವುದಾದರೂ, ಸ್ವಲ್ಪವಾದರೂ ಯಾವುದೇ ಸಂಸ್ಕಾರ 5% ಇದ್ದರೂ, 10% ಇದ್ದರೂ, 50% ಇದ್ದರೂ, ಎಷ್ಟೇ ಇರಲಿ, ಕಡಿಮೆ ಪಕ್ಷ 5% ಇದ್ದರೂ ಸಹ ಅದನ್ನು ಇಂದು ಸಂಸ್ಕಾರದ ಹೋಲಿಯಲ್ಲಿ ಸುಟ್ಟು ಹಾಕಿ. ಈ ಸಂಸ್ಕಾರ ನನಗೆ ಮಧ್ಯೆ-ಮಧ್ಯೆ ತೊಂದರೆ ಕೊಡುತ್ತದೆ ಎಂದು ಯಾವ ಸಂಸ್ಕಾರವನ್ನು ತಿಳಿದುಕೊಂಡಿದ್ದೀರೋ, ಪ್ರತಿಯೊಬ್ಬರಿಗೂ ಅರ್ಥವಾಗುತ್ತದೆಯಲ್ಲವೇ? ಹೋಲಿ ಅಂದರೆ ಒಂದು ಸುಡುವುದು ಇನ್ನೊಂದು ಬಣ್ಣ ಹಾಕುವುದು. ಎರಡು ಪ್ರಕಾರದ ಹೋಲಿ ಇರುತ್ತದೆ ಮತ್ತು ಹೋಲಿಯ ಅರ್ಥವೇ ಆಗಿದೆ ಕಳೆದದ್ದು ಕಳೆದು ಹೋಯಿತು ಅಂದಮೇಲೆ ಬಾಪ್‌ದಾದಾ ಬಯಸುತ್ತಾರೆ - ಇಂದು ಯಾವುದೆಲ್ಲಾ ಅಂತಹ ಸಂಸ್ಕಾರ ಉಳಿದುಕೊಂಡಿದೆಯೋ, ಯಾವ ಕಾರಣದಿಂದ ಜಗತ್ತು ಪರಿವರ್ತನೆ ಆಗುತ್ತಿಲ್ಲವೋ, ಇಂದು ಆ ಬಲಹೀನ ಸಂಸ್ಕಾರವನ್ನು ಸುಡುವುದು ಅರ್ಥಾತ್ ಸಂಸ್ಕಾರ ಮಾಡುವುದು. ಸುಡುವುದಕ್ಕೂ ಸಹ ಸಂಸ್ಕಾರ ಎಂದು ಹೇಳುತ್ತಾರಲ್ಲವೇ. ಯಾವಾಗ ಮನುಷ್ಯರು ಸಾಯುತ್ತಾರೆಯೋ ಆಗ ಸಂಸ್ಕಾರ ಎಂದು ಹೇಳುತ್ತಾರೆ ಅರ್ಥಾತ್ ಸಮಾಪ್ತಿ

ಮಾಡುವುದು – ಸದಾ ಕಾಲಕ್ಕಾಗಿ. ಹಾಗೆಯೇ ಇಂದು ಸಂಸ್ಕಾರದ ಸಂಸ್ಕಾರ ಮಾಡಿಕೊಳ್ಳಲಾಗುತ್ತದೆಯೇ? ಮಾಡಿಕೊಳ್ಳಬಲ್ಲಿರಾ? ತಾವು ಹೇಳುವಿರಿ- ನಾವಂತೂ ಈ ಸಂಸ್ಕಾರವಿರಲಿ ಎಂದು ಇಚ್ಛಿಸುವುದಿಲ್ಲ ಆದರೆ ಬಂದುಬಿಡುತ್ತದೆ ಏನು ಮಾಡುವುದು? ಆ ರೀತಿ ಯೋಚಿಸುತ್ತೀರಾ? ಒಳ್ಳೆಯದು. ತಪ್ಪಾಗಿ ಬಂದುಬಿಡುತ್ತದೆ. ಒಂದುವೇಳೆ ಯಾರಿಗಾದರೂ ಕೊಟ್ಟ ವಸ್ತುವನ್ನು, ಅಪ್ಪಿ-ತಪ್ಪಿ ತಮ್ಮ ಬಳಿ ಬಂದರೆ ಏನು ಮಾಡುತ್ತೀರಿ? ಜೋಪಾನವಾಗಿ ಬೀರುವಾನಲ್ಲಿ ಇಡುತ್ತೀರಾ, ಇಡುತ್ತೀರಾ? ಒಂದುವೇಳೆ ಬಂದರೂ ಸಹ ಹೃದಯದಲ್ಲಿ ಇಟ್ಟುಕೊಳ್ಳಬೇಡಿ ಏಕೆಂದರೆ ಹೃದಯದಲ್ಲಿ ತಂದೆ ಕುಳಿತಿದ್ದಾರಲ್ಲವೇ! ಆದ್ದರಿಂದ ತಂದೆಯ ಜೊತೆ ಆ ಸಂಸ್ಕಾರವನ್ನೂ ಸಹ ಇಟ್ಟರೆ ಚೆನ್ನಾಗಿರುತ್ತದೆಯೇ, ಇಲ್ಲ ತಾನೇ. ಆದ್ದರಿಂದ ಒಂದುವೇಳೆ ಅಪ್ಪಿ- ತಪ್ಪಿ ಬಂದುಬಿಟ್ಟರೆ ಅಂತರಾಳದಿಂದ ಹೇಳಬೇಕು ಬಾಬಾ-ಬಾಬಾ-ಬಾಬಾ ಸಾಕು. ಸಮಾಪ್ತಿ. ಬಿಂದು ಆಗಿಬಿಡುತ್ತದೆ. ಬಾಬಾ ಏನಾಗಿದ್ದಾರೆ? ಬಿಂದು ಅಂದಮೇಲೆ ಬಿಂದು ಆಗಿಬಿಡುತ್ತದೆ. ಹೃದಯದಿಂದ ಹೇಳಿದರೆ ಮಾತ್ರ. ಬಾಕಿ ಹಾಗೆಯೇ ಸುಮ್ಮನೆ ನೆನಪು ಮಾಡಿದರೆ, ಬಾಬಾ ತೆಗೆದುಕೊಳ್ಳಿ-ತೆಗೆದುಕೊಳ್ಳಿ ಎಂದು ಹೇಳುತ್ತಾರೆ, ತಮ್ಮ ಬಳಿಯೇ ಇಟ್ಟುಕೊಂಡು ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಹೇಗೆ ತೆಗೆದುಕೊಳ್ಳುತ್ತಾರೆ? ತಮ್ಮ ವಸ್ತುವನ್ನು ಹೇಗೆ ತೆಗೆದುಕೊಳ್ಳುತ್ತಾರೆ? ಮೊದಲು ತಾವು ನನ್ನ ವಸ್ತುವಲ್ಲ ಎಂದು ತಿಳಿದುಕೊಳ್ಳಿ ಆಗ ಬಾಬಾ ತೆಗೆದುಕೊಳ್ಳುತ್ತಾರೆ. ಬೇರೆಯವರ ವಸ್ತುವನ್ನು ತೆಗೆದುಕೊಳ್ಳುತ್ತಾರೆಯೇ? ಹಾಗಾದರೆ ಏನು ಮಾಡುತ್ತೀರಿ? ಹೋಲಿ ಆಚರಿಸುತ್ತೀರಾ? ಆಚರಿಸುತ್ತೀರಾ? ಆಗಿ ಹೋಯಿತು, ಕಳೆದುಹೋಯಿತು. ಒಳ್ಳೆಯದು, ಧೃಢ ಸಂಕಲ್ಪ ಮಾಡುತ್ತಿದ್ದೇವೆ ಎಂದು ಯಾರು ತಿಳಿದುಕೊಂಡಿದ್ದೀರಿ, ತಾವು ಪದೇ-ಪದೇ ತೆಗೆದು ಹಾಕಿದರೆ ಹೊರಟು ಹೋಗುತ್ತದೆ. ಒಳಗಡೆ ಇಟ್ಟುಕೊಳ್ಳಬೇಡಿ, ಏನು ಮಾಡಲಿ, ಹೇಗೆ ಮಾಡಲಿ, ಹೋಗುವುದೇ ಇಲ್ಲ, ಈ ರೀತಿ ಅಲ್ಲ. ತೆಗೆಯಲೇಬೇಕು. ಧೃಡಸಂಕಲ್ಪ ಮಾಡುತ್ತೀರಾ? ಯಾರು ಮಾಡುತ್ತೀರೋ ಅವರು ಈಗ ಕೈಯನ್ನು ಎತ್ತಿರಿ. ಮನಸ್ಸಿನಿಂದ ಎತ್ತಬೇಕು. ಹೊರಗಿನಿಂದ ಎತ್ತಬಾರದು. ಮನಸ್ಸಿನಿಂದ. (ಕೆಲವರು ಎತ್ತುತ್ತಿಲ್ಲ) ಇವರು ಕೈ ಎತ್ತುತ್ತಿಲ್ಲ. (ಎಲ್ಲರೂ ಎತ್ತಿದರು) ಬಹಳ ಒಳ್ಳೆಯದು. ಶುಭಾಶಯಗಳು. ಏನೆಂದರೆ ಒಂದುಕಡೆ ಅಡ್ವಾನ್ಸ್ ಪಾರ್ಟಿಯು ಬಾಪ್‌ದಾದಾರವರಿಗೆ ಪದೇ-ಪದೇ ಹೇಳುತಿದ್ದಾರೆ - ಇನ್ನೂ ಎಲ್ಲಿಯವರೆಗೆ, ಎಲ್ಲಿಯವರೆಗೆ, ಎಲ್ಲಿಯವರೆಗೆ? ಎರಡನೆಯದಾಗಿ ಪ್ರಕೃತಿಯೂ ಸಹ ತಂದೆಗೆ ಈಗ ಪರಿವರ್ತನೆ ಮಾಡಿ ಎಂದು ಅರ್ಜಿ ಹಾಕುತ್ತಿದೆ. ಬ್ರಹ್ಮಾತಂದೆಯೂ ಸಹ ಯಾವಾಗ ಪರಮಧಾಮದ ದ್ವಾರವನ್ನು ತೆರೆಯುತ್ತೀರಿ? ಎಂದು ಕೇಳುತ್ತಾರೆ ಏಕೆಂದರೆ ಜೊತೆಯಲ್ಲಿಯೇ ಹೋಗಬೇಕಲ್ಲವೆ. ಇಲ್ಲಿಯೇ ಉಳಿದುಕೊಳ್ಳಬಾರದು ಜೊತೆಯಲ್ಲಿಯೇ ಹೋಗಬೇಕಲ್ಲವೆ! ಜೊತೆಯಲ್ಲಿ ಬಾಗಿಲನ್ನು ತೆರೆಯುತ್ತೀರಾ! ಭಲೆ ಬೀಗವನ್ನು ಬ್ರಹ್ಮಾತಂದೆಯೇ ತೆರೆಯುವರು ಆದರೆ ಜೊತೆಯಲ್ಲಂತೂ ಇರುವಿರಲ್ಲವೆ! ಅಂದಮೇಲೆ ಈಗ ಈ ಪರಿವರ್ತನೆಯನ್ನು ಮಾಡಿಕೊಳ್ಳಿರಿ ಸಾಕು ಅದನ್ನು(ಮಾಯೆ) ತರಲೇಬಾರದು. ಅದು ನನ್ನ ವಸ್ತುವೇ ಅಲ್ಲ. ಬೇರೆಯವನಾದ ರಾವಣನ ವಸ್ತುವನ್ನೇಕೆ ಇಟ್ಟುಕೊಂಡಿದ್ದೀರಿ! ಇನ್ನೊಬ್ಬರ ವಸ್ತುವನ್ನು ಇಟ್ಟುಕೊಳ್ಳುತ್ತಾರೆಯೇ? ಅಂದಮೇಲೆ ಇದು ಯಾರದು? ರಾವಣನದಾಗಿದೆಯಲ್ಲವೆ! ರಾವಣನ ವಸ್ತುವನ್ನು ತಾವೇಕೆ ಇಟ್ಟುಕೊಂಡಿದ್ದೀರಿ? ಇಟ್ಟುಕೊಳ್ಳಬಹುದೇ? ಇಟ್ಟುಕೊಳ್ಳಬಾರದಲ್ಲವೇ, ಪಕ್ಕಾ ಇದೆಯೆ? ಪಕ್ಕಾ? ಒಳ್ಳೆಯದು. ಅಂದಾಗ ಬಣ್ಣದ ಹೋಲಿಯನ್ನು ಭಲೆ ಆಚರಿಸಿ ಆದರೆ ಮೊದಲು ಈ ಹೋಲಿಯನ್ನು ಆಚರಿಸಿ. ತಾವು ನೋಡುತ್ತೀರಿ, **ತಮ್ಮ ಗಾಯನವಾಗಿದೆ ದಯಾಹೃದಯಿ(ಮರ್ಸಿ ಫುಲ್). ಆಗಿದ್ದೀರಾ? ತಾವು ದಯಾಹೃದಯಿ ದೇವಿಯರು ಮತ್ತು ದೇವತೆಗಳಲ್ಲವೇ! ಆಗಿದ್ದೀರಾ?**

**ಅಂದಮೇಲೆ ದಯೆಬರುತ್ತಿಲ್ಲವೇ? ತಮ್ಮ ಸಹೋದರ-ಸಹೋದರಿಯರು ಇಷ್ಟು ದುಃಖಿಯಾಗಿದ್ದಾರೆ, ಅವರ ದುಃಖವನ್ನು ನೋಡಿ ದಯೆಬರುವುದಿಲ್ಲವೆ? ಬರುತ್ತದಯೇ ದಯೆ? ಅಂದಾಗ ಸಂಸ್ಕಾರವನ್ನು ಪರಿವರ್ತಿಸಿಕೊಳ್ಳಿ ಆಗ ಸಂಸಾರವೂ ಪರಿವರ್ತನೆಯಾಗುವುದು. ಎಲ್ಲಿಯವರೆಗೆ ಸಂಸ್ಕಾರವು ಬದಲಾಗುವುದಿಲ್ಲವೋ ಅಲ್ಲಿಯವರೆಗೆ ಸಂಸಾರವು ಬದಲಾಗುವುದಿಲ್ಲ ಅಂದಮೇಲೆ ಏನು ಮಾಡುತ್ತೀರಿ?**

ಇಂದು ಖುಷಿಯ ಸಮಾಚಾರವನ್ನು ಕೇಳಿದೆವು - ಎಲ್ಲರೂ ದೃಷ್ಟಿಯನ್ನು ತೆಗೆದುಕೊಳ್ಳಬೇಕು. ಬಹಳ ಒಳ್ಳೆಯ ಮಾತು. ಬಾಪ್‌ದಾದಾರವರಂತೂ ಮಕ್ಕಳ ಆಜ್ಞಾಕಾರಿಯಾಗಿದ್ದಾರೆ ಆದರೆ..... ಆದರೆ ಶಬ್ಧವನ್ನು ಕೇಳಿ ನಗುತ್ತಿದ್ದಾರೆ. ಭಲೆ ನಕ್ಕುಬಿಡಿ. ಹೇಳುತ್ತಾರೆ - ದೃಷ್ಟಿಯಿಂದ ಸೃಷ್ಟಿಯು ಬದಲಾಗುತ್ತದೆ. ಅಂದಾಗ ಇಂದಿನ ದೃಷ್ಟಿಯಿಂದ ಸೃಷ್ಟಿಯನ್ನು ಪರಿವರ್ತನೆ ಮಾಡಲೇಬೇಕಾಗಿದೆ. ಬಾಪ್‌ದಾದಾ ನೋಡುತ್ತಿದ್ದಾರೆ - ಸಂಪನ್ನತೆ ಮತ್ತು ಯಾವುದೆಲ್ಲಾ ಪ್ರಾಪ್ತಿಯಾಗಿದೆಯೋ ಅದರ ಬಹಳ ಸಮಯದ ಅಭ್ಯಾಸವು ಬೇಕು. ಸಮಯಕ್ಕೆ ಆಗಿಬಿಡುತ್ತದೆಯೆಂದಲ್ಲ, ಬಹಳ ಸಮಯದ ರಾಜ್ಯಭಾಗ್ಯವನ್ನು ಪಡೆಯಬೇಕೆಂದರೆ ಸಂಪನ್ನತೆಯೂ ಸಹ ಬಹಳ ಸಮಯದಿಂದ ಬೇಕು ಅಂದಾಗ ಸರಿಯೆ? ಡಬಲ್ ವಿದೇಶಿಯರು ಖುಷಿಯಲ್ಲಿದ್ದೀರಾ? ಒಳ್ಳೆಯದು.

ಈಗ ಶಾಂತಿವನದ ಬೇಹದ್ ಮನೆಯಲ್ಲಿ ಕುಳಿತಿದ್ದೀರಲ್ಲವೇ! ಪ್ರತಿಯೊಂದು ಸ್ಥಾನಕ್ಕೆ ಲಾಭವಿದೆ. ಮೇಲಿನ ಸ್ಥಾನಕ್ಕೆ ಲಾಭವಿದೆ. ಶಾಂತಿವನಕ್ಕೆ ಲಾಭವಿದೆ. ಇಲ್ಲಿ ಪರಿವಾರಕ್ಕೆ, ದಾದಿಯರಿಗೆ ಸಮೀಪವಾಗಿ ಇದ್ದೀರಿ ಮತ್ತು ಅಲ್ಲಿ ಬಾಪ್‌ದಾದಾರವರ ಕರ್ಮ ಭೂಮಿಗೆ ಸಮೀಪವಾಗಿ ಇರುತ್ತೀರಿ. ಆದರೆ ಚೆನ್ನಾಗಿ ಅನಿಸುತ್ತಿದೆಯೇ ಅಥವಾ ಇಲ್ಲವೇ? ಮೇಲಿನ ಸ್ಥಾನ ಸ್ವಲ್ಪ ನೆನಪು ಬರುತ್ತಿದೆಯೇ? ಬಾಪ್‌ದಾದಾರವರಿಗೆ ಇದೇ ಆನಂದವಾಗಿದೆ. ಡಬಲ್ ವಿದೇಶಿಯರು ಸ್ವಲ್ಪ ಸಮಯದಲ್ಲಿ ಬಹಳ ಸಂಖ್ಯೆ ಹೆಚ್ಚುತ್ತಿದ್ದಾರೆ. ಸಂಖ್ಯೆಯ ಕಾರಣವಾಗಿ ಮೇಲೆ ಇರಲಾಗುತ್ತಿಲ್ಲ. ಸಂಖ್ಯೆ ಹೆಚ್ಚುವುದು ಸಂತೋಷದ ವಿಷಯವೇ ಅಲ್ಲವೇ! ಮತ್ತು ಒಂದೇ ಸಮಯದಲ್ಲಿ ಎಲ್ಲರೂ ಒಂದೇ ಸ್ಥಳದಲ್ಲಿ ಕುಳಿತುಕೊಳ್ಳುವುದು ಸಹ ಒಂದು ಅನುಭವವೇ ತಾನೇ ಮತ್ತು ಎಲ್ಲರಿಗಿಂತಲೂ ಮೊದಲು ಮದುಬನ ನಿವಾಸಿಯರು ಡಬಲ್ ವಿದೇಶಿಯರಿಗೆ ಧನ್ಯವಾದಗಳನ್ನು ಹೇಳಬೇಕು ಏಕೆಂದರೆ ಡಬಲ್ ವಿದೇಶಿಯರ ಸಮಯದಲ್ಲಿ ಮಧುಬನ ನಿವಾಸಿಯರಿಗೆ ಅವಕಾಶವನ್ನು ಕೊಟ್ಟಿದ್ದಾರೆ. ಮಧುಬನದವರು ಚಪ್ಪಾಳೆಯನ್ನು ಹೊಡೆಯಿರಿ. ಮಧುಬನದವರು ಎಷ್ಟು ಖುಷಿ ಪಡುತ್ತಿದ್ದಾರೆಯೋ ನೋಡಿರಿ. ಇಲ್ಲದಿದ್ದರೆ ಪೂರ್ಣ ಸೀಸನ್ ನಲ್ಲಿ ಮದುಬನ ನಿವಾಸಿಯರಿಗೆ ಅವಕಾಶ ಎಲ್ಲಿ ಲಭಿಸಿದೆ. ಡಬಲ್ ವಿದೇಶಿಯರಿಗೆ ಅವಕಾಶವನ್ನು ಕೊಟ್ಟಿದ್ದೀರಿ. ಆದ್ದರಿಂದಲೇ ಬಾಪ್‌ದಾದಾ ಸಹ ಧನ್ಯವಾದಗಳನ್ನು ಹೇಳುತ್ತಿದ್ದಾರೆ.

ಮಾತೆಯರೊಂದಿಗೆ: ಮಾತೆಯರು ಬಹಳ ತಿಳುವಳಿಕೆಯುಳ್ಳವರು. ಬಾಪ್‌ದಾದಾ ಮಾತೆಯರಿಗೆ ಮುಂದಕ್ಕೆ ಹೋಗುವ ಅವಕಾಶವನ್ನು ಕೊಟ್ಟಿದಾರೆ. ಆ ಅವಕಾಶವನ್ನು ಪ್ರತ್ಯಕ್ಷದಲ್ಲಿ ತಂದಿದ್ದೀರಿ ಅದಕ್ಕಾಗಿ ಬಹಳ ಬಹಳ ಶುಭಾಶಯಗಳು. ಬಹಳ ಒಳ್ಳೆಯ ಶಕ್ತಿಯ ಅವತಾರಗಳಾಗಿದ್ದೀರಿ. ನಿಮ್ಮ ಸಂಘಟನೆಯನ್ನು ಇನ್ನೂ ಹೆಚ್ಚಿಸಿಕೊಳ್ಳಿರಿ. ಎಲ್ಲಿ ನೋಡಿದರೂ ಮಾತೆಯರ ಸಂಖ್ಯೆ ಹೆಚ್ಚಾಗಿಯೇ ಇದೆ. ಡಬಲ್ ವಿದೇಶಿಯರಲ್ಲಿ ಈಗ ಸಂಖ್ಯೆ ಹೆಚ್ಚಾಗಿ ಇದೆ. ಭಾರತ ವಾಸಿಯರಲ್ಲಿಯೂ ಸಹ ಮಾತೆಯರ ಸಂಖ್ಯೆ ಹೆಚ್ಚಾಗಿ ಇದೆ. ಇಡೀ ಕಲ್ಪದಲ್ಲಿ ಈಗ ನಿಮಗೆ ಅವಕಾಶ ಲಭಿಸಿದೆ. ಆದ್ದರಿಂದ

ಈ ನಿಮ್ಮ ಅವಕಾಶವನ್ನು ಚೆನ್ನಾಗಿ ಪಡೆದಿದ್ದೀರಿ. (ಸೆಂಟರ್ ನಿವಾಸಿಯರು ಮತ್ತು ಎನ್. ಸಿ. ಓ ಮೀಟಿಂಗ್ನ ಸಹೋದರಿ ಸಹೋದರರೊಂದಿಗೆ ಮಾತನಾಡುತ್ತಿದ್ದಾರೆ) ಬಹಳ ಒಳ್ಳೆಯದು.

**ಸೇವಾ ಕೇಂದ್ರದ ನಿವಾಸಿಯರು:-** ಎಂದರೆ ಪುಣ್ಯದ ಖಾತೆಯನ್ನು ಹೆಚ್ಚಿಸಿಕೊಳ್ಳುವವರು. ಯಾರು ಬಂದರೂ ಅವರಿಗೆ ತಂದೆಯ ಪರಿಚಯವನ್ನು ಹೇಳಿ ತಂದೆಯವರನ್ನಾಗಿ ಮಾಡುತ್ತಿದ್ದೀರಿ. ಈ ಪುಣ್ಯವು ಜಮಾ ಆಗಿಬಿಡುತ್ತದೆ. ಆದ್ದರಿಂದ ಸೇವಾ ಕೇಂದ್ರದ ನಿವಾಸಿಯರು ಸದಾ ನಿಮ್ಮನ್ನು ನೀವು ನಾನು ಪುಣ್ಯಾತ್ಮ. ಪುಣ್ಯ ಜಮಾ ಮಾಡಿಕೊಳ್ಳಲು ಅವಕಾಶ ಲಭಿಸಿದೆ ಎಂದು ಭಾವಿಸಬೇಕು. ಎಷ್ಟೆಷ್ಟು ಪುಣ್ಯವು ಜಮಾ ಆಗುತ್ತಾ ಇರುತ್ತದೆಯೋ ಅಷ್ಟು ಸ್ವಲ್ಪ ಸ್ವಪ್ನದಲ್ಲಾದರೂ ಸ್ವಲ್ಪ ಪಾಪದ ರೇಖೆ ಯಾವುದಾದರೂ ಇದ್ದರೂ ಅದು ಸಮಾಪ್ತಿಯಾಗಿಬಿಡುತ್ತದೆ. ಇದು ಪುಣ್ಯಾತ್ಮರ ಗ್ರೂಪ್. ಕುಮಾರರು ಪಾಂಡವರು ಸಹ ಸೇವೆಗೆ ನಿಮ್ಮಿತರಾಗಿದ್ದಾರೆ. ಇದು ಒಳ್ಳೆಯ ಅವಕಾಶ ಲಭಿಸಿದೆ. ಸದಾ ಸೇವೆಯನ್ನು ಹೆಚ್ಚಿಸಲು ನಿಮಿತ್ತರಾಗಿ ಬಂದಿದ್ದೀರಿ. ಪಾಂಡವರು, ಶಕ್ತಿಯರು ಇಬ್ಬರಿಗೆ ಬಾಪ್‌ದಾದಾ ಸೇವೆಯ ಶುಭಾಶಯಗಳನ್ನು ಕೊಡುತ್ತಿದ್ದಾರೆ. ಒಳ್ಳೆಯದು. ಚಿಕ್ಕ ಮಕ್ಕಳು ಸಹ ಅದ್ಭುತವನ್ನು ಮಾಡಿ ತೋರಿಸುತ್ತಾರೆ. ದೊಡ್ಡವರು ಮಾಡಲಾಗದ ಸೇವೆಯನ್ನೂ ಚಿಕ್ಕ ಮಕ್ಕಳು ಮಾಡುತ್ತಾರೆ ಏಕೆಂದರೆ ಮಕ್ಕಳ ಮೇಲೆ ಎಲ್ಲರಿಗೂ ಪ್ರೀತಿ ಇರುತ್ತದೆ ಅಲ್ಲವೇ. ಬಹಳ ಚೆನ್ನಾಗಿ ಮಾಡಿದ್ದೀರಿ. ಬಹಳ ಒಳ್ಳೆಯದು, ಒಳ್ಳೆಯದು. ಬಾಪ್‌ದಾದಾ ಹೇಳಿರುವ ವಿಷಯವನ್ನು ಮರೆತು ಹೋಗಬೇಡಿರಿ. ನೆನಪಿಟ್ಟುಕೊಳ್ಳಿರಿ. ಈಗ ಹಳೆಯ ಸಂಸ್ಕಾರಗಳ ಸಮಾಪ್ತಿ ಸಮಾರೋಹವನ್ನು ಆಚರಿಸಿಕೊಳ್ಳುತ್ತೀರಿ. ಈ ಸಮಾರೋಹಕ್ಕೆ ನಿಮ್ಮನ್ನು ಕರೆಯುತ್ತೇನೆ. ಆದರೆ ಯಾರಾದರೆ ಮಾಡುತ್ತಾರೆಯೋ ಅವರನ್ನೇ ಕರೆಯುತ್ತಾರೆ. ಒಳ್ಳೆಯದು.

**ನಾಲ್ಕಾರೂ ಕಡೆಯ ಸರ್ವ ಮೂರು ಸಿಂಹಾಸನಾಧಿಕಾರಿ ವಿಶೇಷ ಆತ್ಮರಿಗೆ, ಸದಾ ಸ್ವರಾಜ್ಯಾಧಿಕಾರಿ ವಿಶೇಷ ಆತ್ಮರಿಗೆ, ಸದಾ ದಯಾಹೃದಯಿಯಾಗಿ ಆತ್ಮರಿಗೆ ಸುಖ-ಶಾಂತಿಯ ಅಂಚಲಿ(ಹನಿ)ಯನ್ನು ನೀಡುವಂತಹ ಮಹಾನ್ ಆತ್ಮರಿಗೆ, ಸದಾ ಧೃಡತೆ ಮತ್ತು ಸಫಲತೆಯ ಅನುಭವ ಮಾಡುವಂತಹ ತಂದೆಯ ಸಮಾನ ಆತ್ಮರಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 05-03-2004.

***ಬಲಹೀನ ಸಂಸ್ಕಾರಗಳನ್ನು ಸಂಸ್ಕಾರ ಮಾಡಿ ಸತ್ಯವಾದ ಹೋಲಿಯನ್ನು ಆಚರಿಸಿ ಆಗ ಸಂಸಾರ(ಪ್ರಪಂಚ) ಪರಿವರ್ತನೆ ಆಗುತ್ತದೆ.***

ಈ ಒಂದು ಜನ್ಮದಲ್ಲಿ, ಚಿಕ್ಕ ಜನ್ಮದಲ್ಲಿ ಒಂದು ವೇಳೆ ಸದಾ ಸ್ವರಾಜ್ಯಾಧಿಕಾರಿಯಾಗದಿದ್ದರೆ 21 ಜನ್ಮಗಳು ಸದಾ ಸ್ವರಾಜ್ಯ ಹೀಗೆ ಲಭಿಸುತ್ತದೆ? ನಾನು ತಯಾರಾಗದಿದ್ದರೆ ಯಾರು ತಯಾರಾಗುತ್ತಾರೆ ಎಂಬ ನಶೆ ಇದೆಯೇ ನೀವು ತಯಾರಾಗದಿದ್ದರೆ ಇನ್ನ್ಯಾರು ತಯಾರಾಗುವುದಿಲ್ಲ ತಾನೇ ನೀವೇ ತಯಾರಾಗುವವರಲ್ಲವೇ ಭವಿಷ್ಯದ ಎಲ್ಲಾ ಸಂಸ್ಕಾರಗಳು ಈಗಲೇ ಕಾಣಿಸಬೇಕು ಏಕೆಂದರೆ ಅವು ಈಗಲೇ ತುಂಬಿ ಕೊಳ್ಳಬೇಕು ಅಲ್ಲಿ ತುಂಬಿಕೊಳ್ಳುವುದಲ್ಲ ಇಲ್ಲೇ ತುಂಬಿಕೊಳ್ಳಬೇಕು ಇಡೀ ಪ್ರಪಂಚ ಈಗ ನಿಮ್ಮ ಸಂಸ್ಕಾರಗಳ ಮೂಲಕವೇ ತಯಾರಾಗುತ್ತಿದೆ ಈಗಿನ ಸಂಸ್ಕಾರಗಳು

ಭವಿಷ್ಯದ ಪ್ರಪಂಚವನ್ನು ತಯಾರು ಮಾಡುತ್ತವೆ ಆದ್ದರಿಂದ ಸಂಸ್ಕಾರಗಳನ್ನು ಬದಲಾಯಿಸಿಕೊಳ್ಳಿ ಆಗ ಪ್ರಪಂಚವು ಪರಿವರ್ತನೆಯಾಬಿಡುತ್ತದೆ. ಸಂಸ್ಕಾರಗಳನ್ನು ಬದಲಾಯಿಸದಿದ್ದರೆ ಪ್ರಪಂಚವನ್ನು ಪರಿವರ್ತನೆ ಮಾಡಲಾಗುವುದಿಲ್ಲ ಎನ್ನುತ್ತಾ ಬಾಪ್‌ದಾದಾ ತನ್ನ ಮಕ್ಕಳೊಂದಿಗೆ ಮಾತನಾಡುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ಬಾಪ್‌ದಾದಾ ನನ್ನಲ್ಲಿ ಭ್ರುಕುಟಿ ಸಿಂಹಾಸನ, ಪರಮಾತ್ಮನ ಹೃದಯ ಸಿಂಹಾಸನ, ಭವಿಷ್ಯದ ವಿಶ್ವ ಸಿಂಹಾಸನ ಎಂಬ ಮೂರು ಸಿಂಹಾಸನಗಳನ್ನು ನೋಡುತ್ತಿದ್ದಾರೆ.

2. ನಾನು ವರ್ತಮಾನದಲ್ಲಿ ಸದಾ ಸ್ವರಾಜ್ಯಾಧಿಕಾರಿಯಾಗಿ ಭವಿಷ್ಯದಲ್ಲಿ 21 ಜನ್ಮಗಳು ಸದಾ ವಿಶ್ವರಾಜ್ಯಾಧಿಕಾರಿಯಾಗುವ ಸಂಪೂರ್ಣ ಅಧಿಕಾರವನ್ನು ಪಡೆದಿದ್ದೇನೆ.

3. 108ರ ಮಾಲೆಯಲ್ಲಿ ಮಣಿಯಾಗುವ ನಾವು ತಯಾರಾಗದಿದ್ದರೆ ಇನ್ಯಾರು ತಯಾರಾಗುತ್ತಾರೆ ಎಂಬ ನಶೆ ಮತ್ತು ನಿಶ್ಚಯವು ನಿಶ್ಚಿತವಾಗಿದೆ.

4. ನಾನಗೆ ಸತ್ಯತೆಯ ಶಕ್ತಿ (ಸ್ವಚ್ಛತೆ ಮತ್ತು ಸ್ಪಷ್ಟತೆಯು) ಒಂದು ಲಿಫ್ಟ್ ನಂತೆ ಕೆಲಸ ಮಾಡಿದೆ, ತಂದೆಯ ಸ್ಮೃತಿ ಸಹಜವಾಗಿದೆ, ಸಂಕಲ್ಪ ಮಾಡಿದಾಕ್ಷಣ ತಂದೆಯು ಹಾಜರಾಗಿ ಬಿಡುತ್ತಿದ್ದಾರೆ.

5. ನನ್ನಲ್ಲಿ ವರ್ತಮಾನ ಸಮಯದಲ್ಲಿ ಒಂದೇ ರಾಜ್ಯ, ಸ್ವರಾಜ್ಯ, ಒಂದೇ ಧರ್ಮ, ಸಂಪೂರ್ಣ ಪವಿತ್ರತೆಯ ಧಾರಣೆ ಲಾ ಆಂಡ್ ಆರ್ಡರ್ ಇದೆಯೇ ಎಂದು ಪರಿಶೀಲನೆ ಮಾಡಿಕೊಂಡು ಭವಿಷ್ಯದ ಎಲ್ಲಾ ಸಂಸ್ಕಾರಗಳನ್ನು ಈಗಲೇ ತುಂಬಿಕೊಳ್ಳುತ್ತಿದ್ದೇನೆ.

6. ನಾನು ವರ್ತಮಾನದಲ್ಲಿ ಅತೀಂದ್ರಿಯ ಸುಖ, ಅಖಂಡ ಶಾಂತಿ, ಸರ್ವಸಂಪತ್ತು, (ಗುಣಗಳು, ಶಕ್ತಿಗಳು, ಜ್ಞಾನ) ಸಂತುಷ್ಟತೆ ಎಲ್ಲಾ ಸಂಸ್ಕಾರಗಳನ್ನು ಸ್ವಯಂನಲ್ಲಿ ಪರಿಶೀಲನೆ ಎಂಬ ದರ್ಪಣದಲ್ಲಿ ಪರಿಶೀಲನೆ ಮಾಡಿಕೊಂಡು ಅದರ ಮೂಲಕ ನಾನು 108ರ ಮಾಲೆಯಲ್ಲಿ ಬರುತ್ತೇನೆಯೇ, ಮುಂದೆ ಬರುತ್ತೇನೆಯೇ, ನಂತರ ಬರುತ್ತೇನೆಯೇ ಎಂದು ನೋಡಿಕೊಳ್ಳುತ್ತಿದ್ದೇನೆ.

7. ವರ್ತಮಾನ ಮತ್ತು ಭವಿಷ್ಯವನ್ನು ನನ್ನ ಹಳೆಯ ಸಂಸ್ಕಾರಗಳ ಬಲಹೀನತೆ ಅಂತಿಮ ಸಂಸ್ಕಾರವನ್ನು (ಸುಟ್ಟು ಹಾಕಿ) ಮಾಡಿ ಹೋಲಿ ಆಚರಿಸಿಕೊಂಡಿದ್ದೇನೆ.

8. ನನ್ನ ಹಳೆಯ ಸಂಸ್ಕಾರಗಳು ಅಪ್ಪಿ -ತಪ್ಪಿ ನನ್ನ ಹತ್ತಿರ ಬಂದರೂ ನಾನು ಮೊದಲು ನನ್ನದಾಗಿ ಭಾವಿಸದೇ, ಮನಸ್ಸಿನಲ್ಲಿಟ್ಟುಕೊಳ್ಳದೇ, ಮನಸ್ಸಿನಿಂದ ಬಾಬಾ ಬಾಬಾ ಎಂಬ ಬಿಂದುವನ್ನು ಇಟ್ಟು ಸಮಾಪ್ತಿ ಮಾಡಿದ್ದೇನೆ.

9. ನಾನು ನನ್ನ ಸಂಸ್ಕಾರಗಳನ್ನು ಬದಲಾಯಿಸಿಕೊಂಡು ಪ್ರಪಂಚವನ್ನು ಪರಿವರ್ತನೆ ಮಾಡುವ ದಯಾ ಸ್ವರೂಪ ದೇವಿ, ದೇವತೆಯಾಗಿದ್ದೇನೆ.

10. ನಾನು ಪುಣ್ಯಾತ್ಮ.